ಸಾಕ್ಷಿಯನ್ನು ದಿನಾಂಕ: 23-02- 2024 ರಂದು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀಸವಾಲುಃ ಶ್ರೀಃ ಹೆಚ್.ಎಸ್.ಎಂ , ಪ್ರತಿವಾದಿ ಪರ ವಕೀಲರಿಂದಃ

6. ದಾವಾ ಸ್ವತ್ತಿನಲ್ಲಿ ಕಾಣಿಸಿರುವ ಐಟಂ ನಂ. 2 ರ ಸರ್ವೇ ನಂ. 86/15 ಮತ್ತು 86/13 ರಲ್ಲಿ ನಿಮಗೆ ಹೇಗೆ ಹಕ್ಕು ಬಂದಿದೆ ಎಂದರೆ ಗೊತ್ತಿಲ್ಲ . ನಿಪಿ-5 ರ ನಕ್ಷೆಯಲ್ಲಿ ಸರ್ವೇ ನಂ. 86/1 ಬಿ1 ರ 0.52 ಎಕರೆ ಜಮೀನಿನ ಉತ್ತರದಲ್ಲಿ ಸರ್ಕಾರದ ಜಮೀನು ಇದೆ . ಸದರಿ ಸರ್ಕಾರಿ ಜಮೀನಿನ ಒಂದು ರಸ್ತೆ ಇದೆ . ಅದನ್ನು ಅರಣ್ಯ ಇಲಾಖೆಯವರು ಮುಚ್ಚಿರುತ್ತಾರೆ . ನಿಪಿ-5 ರಲ್ಲಿ ಕಾಣಿಸಿದ ಸರ್ವೇ ನಂ. 86/1 ಬಿ1 ರಲ್ಲಿ ಕಾಣಿಸಿದ ರಸ್ತೆ ಮೇಲ್ಕಂಡ ಸರ್ಕಾರಿ ರಸ್ತೆಗೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿದೆ . ಸದರಿ ರಸ್ತೆಗೆ ನನ್ನ ಮಗ ಈಗ ಒಂದು ಗೇಟನ್ನು ಇಟ್ಟಿದ್ದಾರೆ ಎಂದರೆ ಹೌದು . ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಿ , ಅದನ್ನು ಒಪ್ಪಿದ ಮೇರೆಗೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು .

7. 8 ನೇ ಪ್ರತಿವಾದಿಯು ಸರ್ವೇ ನಂ. 305/5 ರಲ್ಲಿ ಒಂದು ಮನೆಯನ್ನು ಕಟ್ಟಿದ್ದಾರೆ ಎಂದರೆ ಸರಿದ ಮನೆಯನ್ನು ತುಂಬಾ ವರ್ಷಗಳ ಹಿಂದೆ ಕಟ್ಟಿರುತ್ತಾರೆ . ಅವರ ಮನೆಯಲ್ಲಿ ವಾಹನಗಳು ಇವೆ ಎಂದರೆ ನನಗೆ ಗೊತ್ತಿಲ್ಲ . ಕಳೆದ ವರ್ಷ ಅವರ ಜಾಗದಲ್ಲಿ ಬೋರ್ವೆಲನ್ನು ಹಾಕಿಸಿರುತ್ತಾರೆ . 52 ಸೆಂಟ್ಸ್ ಜಮೀನಿನಲ್ಲಿ ನಾವು ಸಹ ಒಂದು ಬೋರ್ವೆಲ್ಲು ಹಾಕಿರುತ್ತೇವೆ . ಅದನುನ 2 ವರ್ಷಗಳ ಹಿಂದೆ ಹಾಕಿರುತ್ತಾರೆ ಎಂದರೆ ನೆನಪಿಲ್ಲ . ಸದರಿ ಬೋರ್ವೆಲ್ ನ್ನು ಹಾಕಿಸಲು ಬೊಎಾರ್ ವೆಲ್ ಯಂತ್ರ ಗಳು ಮೇಲ್ಕಾಣಿಸಿದ ಸರ್ಕಾರಿ ಜಮೀನಿನ ಮುಖಾಂತರ ಬಂದಿರುತ್ತದೆ ಎಂದರೆ ಹೌದು . ಸರ್ವೇ ನಂ. 86/1 ಬಿ1 ರ ಉತ್ತರಕ್ಕೆ ಇರುವ ರಸ್ತೆಯ ನೆಲಕೆರೆ ರಸ್ತೆ ಎಂದರೆ ಸರಿ .

ಸದರಿ ರಸ್ತೆಯು ಸೌಹಾರ್ದ ನಗರ ಎಂಬ ಸ್ಥಳಕ್ಕೆ ಹೋಗುತ್ತದೆ ಎಂದರೆ ಸರಿಯಲ್ಲ. ಸದರಿ ರಸ್ತೆಯ ದಕ್ಷಿಣಕ್ಕೆ ಬಂದರೆ ಬೆಳ್ಮಣ್ ಮೂಡಬಿದ್ರೆ ರಸ್ತೆಗೆ ಸೇರುತ್ತದೆ ಎಂದರೆ ಸರಿ . ಸದರಿ ರಸ್ತೆಯನ್ನು ನಾನು ಉಪಯೋಗುತ್ತಿದ್ದೇನೆ ಎಂದರೆ ಸರಿಯಲ್ಲ . ಸದರಿ ರಸ್ತೆಯನ್ನು ಈಗ ಅರಣ್ಯ ಇಲಾಖೆಯವರು ಮುಚ್ಚಿರುತ್ತಾರೆ . ಆದರೆ ಮೊದಲು ಉಪಯೋಗ ಮಾಡುತ್ತಿದ್ದೇವು . ಅರಣ್ಯ ಇಲಾಖೆಯವರು ಸದರಿ ರಸ್ತೆಯುನ್ನು 1 ತಿಂಗಳ ಹಿಂದೆ ಮುಚ್ಚಿರುತ್ತಾರೆ .

8. ವಾದಿಯವರ ಜಮೀನಿನಿನಲ್ಲಿ ನನಗೆ ಯಾವುದೇ ರಸ್ತೆ ಅಥವಾ ದಾರಿ ಹಕ್ಕು ಇಲ್ಲ ಎಂದರೆ ಸರಿಯಲ್ಲ . ದಾವೆಯ ಜೊತೆ ಸಲ್ಲಿಸಿರುವಂತಹ ನಕ್ಷೆಯು ಸರಿಯಾದ ನಕ್ಷೆಯಲ್ಲಿ ಎಂರದೆ ಸರಿಯಲ್ಲ , ಅದನ್ನು ದಾವೆಗೋಸ್ಕರಿರ ಸೃಷ್ಠ ಮಾಡಲಾಗಿದೆ ಎಂದರೆ ಸರಿಯಲ್ಲ . ನಿಮ್ಮ ದಾವಾ ಆಸ್ತಿಗಳನ್ನು ಸಂಪರ್ಕಿಸಲು ಇರುವ ರಸ್ತೆಗಳ ಬಗ್ಗೆ ಸರಿಯಾಗಿ ವಿವರಿಸದೆ ಸತ್ಯಾಂಶವನ್ನು ಮರೆಮಾಚಿ ಈ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ . ದಾವೆಯಲ್ಲಿ ಕೇಳಿದಂತೆ ಪರಿಹಾರವನಬ್ನು ಪಡೆದುಕೊಳ್ಳಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ . ವಾದಿಯರ ಜಮೀನಿನಲ್ಲಿ ಯಾವುದೇ ರಸ್ತೆಯನ್ನು ಉಪಯೋಗಿಸುವ ಅವಶ್ಯಕತೆ ನನಗೆ ಇಲ್ಲ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-

ವ್ಯ ನ್ಯಾಮತ್ತು ಪ್ರ.ದ.ನ್ಯಾದಂ.
ಮೂಡಬಿದಿರೆ